DAB – 430

ದ್ವಿತೀಯ ಬಿ.ಎ. ಪದವಿ ಪರೀಕ್ಷೆ, ಸಪ್ಟೆಂಬರ್/ಅಕ್ಟೋಬರ್ 2012

**Directorate of Distance Education**

**ಕನ್ನಡ ಐಚ್ಛಿಕ ಪತ್ರಿಕೆ - ೨**

**ನಡುಗನ್ನಡ ಮತ್ತು ಹೊಸಗನ್ನಡ ಪಠ್ಯಗಳು**

**(ಪಠ್ಯಗಳು : ಹರಿಶ್ಚಂದ್ರ ಕಾವ್ಯ ಸಂಗ್ರಹ, ಆಯ್ದ ಕುವೆಂಪು ಕವನಗಳು ಮತ್ತು ಗೆಲಿಲಿಯೊ)**

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 70/80

1. ಅ) **ಒಂದರ** ಭಾವ ಸ್ವಾರಸ್ಯವನ್ನು ವಿವರಿಸಿ : **5**

೧) ಘುಡು ಘುಡಿಸುತೊಬ್ಬ ಮುನಿ ಬಂದು ನಾನೋಲಗಂ
ಗೊಡುವ ಮಣಿಮಂಟಪದ ಕಂಭವೆಲ್ಲವನು ತಡೆ
ಗಡಿದು ಹೊಂಗಳಸಂಗಳಂ ಮಾಣದೊಡೆಬಡಿದು ನೆರೆದ ಸಭೆಯೊಳಗೆನ್ನನು।
ಕೆಡಹಿ ಸಿಂಹಾಸನವೊಯ್ವಾಗಳೆನ್ನೆದೆಯ
ನಡರ್ದೊಂದು ಕಾಗೆ ಕರೆದುದು ಬಳಿಕ್ಕಾಂ ಗಿರಿಯ
ನಡರ್ದು ಶಿಖರದೊಳೆಸೆವ ಮಣಿಗೃಹಂಬೊಕ್ಕೆ ನಿದಱಂತಸ್ಥವೇನೆಂದನು.

೨) ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳ ಬನ್ನಿ
ಮೌಢ್ಯತೆಯ ಮಾರಿಯನ್ನು ಹೊರದೂಡಲೈ ತನ್ನಿ
ವಿಜ್ಞಾನದ ದೀವಿಗೆಯ ಹಿಡಿಯ ಬನ್ನಿ
ಓ ಬನ್ನಿ, ಸೋದರರೇ ಬೇಗ ಬನ್ನಿ

ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **4**

ತರಣಿ, ದಾವಾಗ್ನಿ, ಕೈದು, ಕಪ್ಪಡ, ವಸುಧೆ, ಶೋಣಿತ ಸಿತಚ್ಛತ್ರ, ಹೇಮ, ಲಲಾಟ, ಪತಾಕೆ, ನಿರ್ಜರ, ಹಸುಳೆ.

ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2×2=4)**

೧) ವಿಶ್ವಾಮಿತ್ರ

೨) ಫೆಡರ್ ಜೋನಿ

೩) ಜಠರಾಗ್ನಿ.

2. **ನಾಲ್ಕಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : **(4×3=12)**

೧) ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು.

೨) ಹಸುರತ್ತಲ್ ! ಹಸುರಿತ್ತಲ್ ! ಹಸುರೆತ್ತಲ್ ಕಡಲಿನಲಿ

೩) ಹಳೇ ಕಾಲ ಮುಗೀತು, ಒಂದು ಹೊಸಯುಗ ಬಂದಿದೆ.

೪) ಬಿಸುಡದಿರು, ಬಿಸುಡದಿರು ಬೇಡ ಬೇಡ ಕಟಕಟ

೫) ನನ್ನ ವಿಜ್ಞಾನಕ್ಕೆ ಜ್ಞಾನದ ದಾಹ ಇದೆ.

೬) ಇನ್ನೇಕೆ ನುಡಿದು ನಾಚಿಸುವೆ ಭೂಪಾಲ

೭) ಎಲ್ಲಿಯೂ ನಿಲ್ಲದಿರು ಮನೆಯನೆಂದೂ ಕಟ್ಟದಿರು

೮) ಅಕ್ಕಕ್ಕು ಬಚ್ಚಲುದಕಂ ತಿಳಿದಡಾರ ಮಿಹಕ್ಕೆ ಯೋಗ್ಯಂ.

3. ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

೧) ಹರಿಶ್ಚಂದ್ರ ಕಾವ್ಯ – ಸತ್ಯನಿರೂಪಣೆಯ ಅಭಿವ್ಯಕ್ತಿಯೇ ವಿವರಿಸಿ.

೨) ಹರಿಶ್ಚಂದ್ರ ಮತ್ತು ಗಾನರಾಣಿಯರ ವಾಗ್ವಾದದ ಮಹತ್ವವನ್ನು ಚರ್ಚಿಸಿ.

ಆ) ಯಾವುದಾದರೂ **ಒಂದನ್ನು** ಕುರಿತು ಬರೆಯಿರಿ : **5**

೧) ಹರಿಶ್ಚಂದ್ರ ಕಾವ್ಯದ ನಾಟಕೀಯ ಅಂಶಗಳು.

೨) ಹರಿಶ್ಚಂದ್ರನ ಕುಟುಂಬದ ಮಾರಾಟ ಸನ್ನಿವೇಶದ ಔಚಿತ್ಯ.

4. ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

೧) ಕಲ್ಕಿ ಕವನ ಬಡವರ ಭರವಸೆಯ ಆಶಾಕಿರಣವೇ ವಿವರಿಸಿ.

೨) ದೇವರು ರುಜು ಮಾಡಿದನು ಕವಿತೆಯ ಆಶಯವನ್ನು ಬರೆಯಿರಿ.

ಆ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **5**

೧) ಶ್ರಿ ಸಾಮಾನ್ಯನ ದೀಕ್ಷಾಗೀತೆಯ ಆಶಯವೇನು ?

೨) ಅನಿಕೇತನ ಕವಿತೆಯ ವಿಶ್ವವ್ಯಾಪಕತೆಯನ್ನು ವಿವರಿಸಿ.

5. ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

೧) ಗೆಲಿಲಿಯೋ ನಾಟಕದ ಪ್ರೇರಣೆಗಳನ್ನು ವಿವರಿಸಿ.

೨) ಭೂಮಿ ಸೂರ್ಯನ ಸುತ್ತ ತಿರುಗುವ ಕ್ರಿಯೆಯನ್ನು ಗೆಲಿಲಿಯೋ ಹೇಗೆ ವಿವರಿಸಿದ್ದಾನೆ.

ಆ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **5**

೧) ಅಂದ್ರಿಯಾ ಯಾರು ? ನಾಟಕದಲ್ಲಿ ಆ ಪಾತ್ರದ ಮಹತ್ವವೇನು ?

೨) ಪ್ರಾಕ್ಯುರೇಟರ್ ಪಾತ್ರವನ್ನು ವಿವರಿಸಿ.

[**80** ಅಂಕಗಳ ಸ್ಕೀಮ್‌ನವರಿಗೆ **ಕಡ್ಡಾಯ** ಪ್ರಶ್ನೆ] :

6. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

೧) ಕುವೆಂಪು ಅವರ ಪ್ರಕೃತಿ ಗೀತೆಗಳ ಆಶಯವನ್ನು ಆನಂದಮಯ ಈ ಜಗಹೃದಯ ಮತ್ತು ಬಾ ಪಾಲ್ಗುಣ ರವಿ ದರ್ಶನಕೆ ಕವಿತೆಗಳ ಆಧಾರದಿಂದ ಚರ್ಚಿಸಿ.

೨) ಹರಿಶ್ಚಂದ್ರ ಮತ್ತು ವೀರಬಾಹುಕನ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.

---